ನಾನಾರ್ಥಗಳುಂಟು. ಬಣ್ಣಿಸು, ಬಣ್ಣನೆ, ಮಣಿಸರದ ಬಣ್ಣ, ಮೈಬಣ್ಣ ಬಣ್ಣದ ಮಾತಾಡಿ ಮೋಸಗೊಳಿಸು, ವರ್ಣಿಸು, ಬೇಳುಮಾಡು ಎಂಬಿತ್ಯಾದಿ ಅರ್ಥಗಳಿವೆ. ಸಮಾಜಶಾಸ್ತ್ರ ಅಧ್ಯಯನದಲ್ಲಿ ವರ್ಣ ಒಂದು ಮುಕ್ತ ವ್ಯವಸ್ಥೆಯಾಗಿದ್ದು, ವರ್ಣಗಳ ಆಧಾರದಿಂದ ಜಾತಿ ವ್ಯವಸ್ಥೆ ಆವಿರ್ಭವಿಸಿದ್ದನ್ನು, ಅದರ ಅಧಿಪತ್ಯ ಅದು ಸೃಷ್ಟಿಸಿದ ಅಸಮಾನತೆಯನ್ನು ಯಾರೂ ಮರೆಯುವುದಿಲ್ಲ. ಕಪ್ಪು ಮತ್ತು ಬಿಳಿಯ ಬಣ್ಣಗಳು ಇವತ್ತಿಗೂ ಆಗಾಗ ಮುನ್ನೆಲೆಗೆ ಬರುತ್ತಿರುತ್ತವೆ. ಕಪ್ಪು ಬಣ್ಣ, ಗಂಡು ಮಕ್ಕಳಿಗಿಂತ ಹೆಣ್ಣುಮಕ್ಕಳ ನೆಮ್ಮದಿಯನ್ನು ಹಾಳು ಮಾಡುತ್ತದೆ. ವಿದ್ಯಾಭ್ಯಾಸ, ಉದ್ಯೋಗಗಳು ಪ್ರಮುಖ ಪಾತ್ರ ವಹಿಸುತ್ತಿರುವ ಈ ಹೊತ್ತಿನಲ್ಲೂ ಕಪ್ಪು, ಬಿಳಿ ಅಂತ ಮಾತನಾಡಿ, ತಮ್ಮ ಬಣ್ಣಗಳನ್ನು ಬಯಲು ಮಾಡಿಕೊಳ್ಳುತ್ತಿರುತ್ತಾರೆ. ಮಾತ್ರವಲ್ಲ ಪೆನ್ಸಿಲ್ವೇನಿಯಾ, ದಕ್ಷಿಣ ಆಫ್ರಿಕಾ, ಜಪಾನ್, ಬ್ರೆಜಿಲ್, ಫಿಜಿ, ಅಮೆರಿಕದಂಥ ದೇಶಗಳು



ಒಂದು ಕಾಲದಲ್ಲಿ ವರ್ಣಭೇದ ನೀತಿಯನ್ನು ತಾರಕಕ್ಕೇರಿಸಿದ್ದವು ಗುಲಾಮಗಿರಿಯನ್ನು ಹುಟ್ಟು ಹಾಕಿದ್ದರ ಪರಿಣಾಮ ಹೋರಾಟಗಳೇ ನಡೆದಿವೆ.

ಅವತ್ತಿಗೂ ಇವತ್ತಿಗೂ ಮನುಷ್ಯರ ಬದುಕಿನಲ್ಲಿ ಬಣ್ಣ ಸಮಾನತೆಗಿಂತ ಅಸಮಾನತೆಯನ್ನು ಸೃಷ್ಟಿಸಿದ್ದೇ ಇತಿಹಾಸ.

ಬಯಲಾಗುವುದೆಂದರೆ ಒಂದು ಸಂಗತಿ ಮತ್ತೊಂದು ರೂಪ ಪಡೆಯುವುದು ಎಂದರ್ಥ. ಬದಲಾವಣೆಯ ಮುಂದುವರಿದ ರೂಪವೇ ಬಯಲಾಗುವಿಕೆ. ಇದು ನಕಾರಾತ್ಮಕ ಮತ್ತು ಸಕಾರಾತ್ಮಕವಾಗಿರುತ್ತದೆ. ಬಯಲು ಎಂಬ ನಾಮಪದಕ್ಕೂ ನಾನಾರ್ಥಗಳುಂಟು. ಬದಲಾಗುವುದು. ಆತ್ಮವಂಚನೆ ನಿಜರೂಪ ತೋರುವುದು, ಐಕ್ಯ, ಬಂಧಮುಕ್ತ, ಬಹಿರಂಗ ಪ್ರಕಟಗೊಳ್ಳು, ಶೂನ್ಯಸಂಪಾದನೆ, ನಂಬಿಕೆ ಕಳೆದು ಕೊಳ್ಳುವುದು, ಮೋಸ, ಕಪಟ, ಅನ್ಯಾಯ ದಿನಕ್ಕೊಂದು ಬಗೆಯಾಗಿರುವುದು ಹೀಗೆ. ಇದರ ಅರ್ಥ ಪ್ರಾಣಿ, ಪಕ್ಷಿ, ನಿಸರ್ಗದ ಹತ್ತು ಹಲವು ಬಗೆಗಳಿಗೆ ಒಂದು ಥರವಾದರೆ ಮನುಷ್ಯ ಅಂತ ಬಂದಾಗ ಬಯಲಾಗುವುದೆಂದರೆ ಬೆಚ್ಚಿ ಬೀಳಿಸುವ ವಿಶ್ವಾಸ ಕಳೆದುಕೊಳ್ಳುವ ಪ್ರಕ್ರಿಯೆಯಾಗಿದೆ. ಕುಟುಂಬದ ಒಳಗೆ ಹೊರಗೆ ಬಣ್ಣ ಬಯಲಾಗುತ್ತಲೇ ಇರುತ್ತದೆ. ಇದಕ್ಕೆ ಲಿಂಗ ತಾರತಮ್ಯವಿರುವುದಿಲ್ಲ. ಹಾಗೆಯೇ ಯಾರ ಬಣ್ಣ ಯಾವಾಗ ಹೇಗೆ ಬಯಲಾಗುತ್ತದೆ ಅಂತ ಹೇಳಲಾಗುವುದಿಲ್ಲ.

ಅವತ್ತೊಂದು ದಿನ ಉರಿ ಬಿಸಿಲು ಬಲಗೈನ ತೋರು ಬೆರಳಿಗೆ ಉಗುರು ಸುತ್ತಾಗಿ ಜೀವ ಹಿಂಡುತ್ತಿತ್ತು. ಆಸ್ಪತ್ರೆಗೆ ಹೊರಟೆ. ಆಗ ಸ್ಕೂಟರ್ ಇರಲಿಲ್ಲ. ಛತ್ರಿ ಹಿಡಿದು ರೋಡಿಗಿಳಿದೆ. ಬಹಳ ಹತ್ತಿರದ ಮನೆಯ ಆಂಟಿಯೊಬ್ಬರು ಇಲ್ಲಿಇಲ್ಲಿ ಅಂದರು ತಿರುಗಿ ನೋಡಿದೆ. ಬನ್ನಿ ಇಲ್ಲಿ ಎಂದರು. ಅವರು ನಿಂತಲ್ಲಿಗೆ ಹೋದೆ. ನಮ್ಮ ಮಗನ ಮದುವೆ ಎಂದರು. 'ಹೌದಾ ತುಂಬಾ ಖುಷಿಯಾಯಿತು ಯಾವಾಗ ಮದುವೆ?' ಅಂತ ಕೇಳಿದೆ. 'ಮದುವೆ ಲೇಟು, ಮುಂದಿನ ತಿಂಗಳು. ಪತ್ರಿಕೆ ಯಾರಿಗೂ ಹೇಳಲ್ಲ' ಅಂದ್ರು. 'ಓ ಸಿಂಪಲ್ಲಾಗಿ ದೇವಸ್ಥಾನದಲ್ಲಿ ಮಾಡಿಸುತ್ತೀರಾ' ಅಂದೆ.

